# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಡಗು–ಮಡಿಕೇರಿ

## SC No. 59/2020

| | | | |
|---|---|---|---|
| ಸಾಕ್ಷಿದಾರರ ಹೆಸರು | : | **ಶ್ರೀ ದರ್ಶನ್ ಕೆ.ಆರ್** | **PW** – 6 |
| ತಂದೆಯ ಹೆಸರು | : | **ರಮೇಶ್ ಕೆ.ಯು** | **CW** – 10 |
| ವಯಸ್ಸು | : | **26 ವರ್ಷ** | |
| ವೃತ್ತಿ | : | **ರೆಸಾರ್ಟ್ ನಲ್ಲಿ ಕೆಲಸ** | |
| ವಾಸ | : | **ಮರಗೋಡು ಗ್ರಾಮ, ಮಡಿಕೇರಿ ತಾಲೂಕು** | |

**ಸಾಕ್ಷಿಯನ್ನು ದಿನಾಂಕ 09–03–2026 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**<u>ಮುಖ್ಯ ವಿಚಾರಣೆ: ಸರ್ಕಾರಿ ಅಭಿಯೋಜಕರಿಂದಃ</u>**

1. ನನಗೆ ಚಾಸಾ–1 ಲೋಕೇಶ್ ಇವರ ಪರಿಚಯ ಇರುತ್ತದೆ. ಚಾಸಾ–9 ನನಗೆ ಅಣ್ಣನಾಗಬೇಕು. ನಾನು ದಿನಾಂಕ 12.11.2019 ರಂದು ಮಡಿಕೇರಿ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪೊಲೀಸರು ಲೋಕೇಶ್ ಈತನು ಹಾಜರುಪಡಿಸಿದ ಶರ್ಟನ್ನು ಪಂಚನಾಮೆ ಮಾಡಿ ಅಮಾನತುಪಡಿಸಿಕೊಂಡಿರುತ್ತಾರೆ. ಪಂಚನಾಮೆಯನ್ನು **ನಿಪಿ–6** ಎಂದು ಗುರುತಿಸಲಾಯಿತು. ಅದರ ಮೇಲಿರುವ ಸಾಕ್ಷಿ ಸಹಿಯನ್ನು **ನಿಪಿ–6(ಎ)** ಎಂದು ಗುರುತಿಸಲಾಯಿತು. ಸಾಕ್ಷಿ ಶರ್ಟನ್ನು ನೋಡಿ ಗುರುತಿಸಿದ್ದು, ಅದನ್ನು **ಮುಮಾ–1** ಎಂದು ಗುರುತಿಸಲಾಯಿತು. ನನ್ನ ಜೊತೆ ಪಂಚನಾಮೆಗೆ ಪ್ರಾಸಾ–9 ಕೂಡ ಸಹಿ ಮಾಡಿರುತ್ತಾರೆ.

**ಪಾಟೀ ಸವಾಲು– ಆರೋಪಿ ಪರ ವಕೀಲರಾದ ಶ್ರೀ ಬಿ.ಡಿ.ಕೆ. ರವರಿಂದಃ**

1. ನಾನು ಮತ್ತು ಪಿರ್ಯಾದಿ ನ್ಯಾಯಾಲಯಕ್ಕೆ ಜೊತೆಯಲ್ಲೆ ಬಂದಿರುತ್ತೇವೆ. ಪೊಲೀಸರು ನನಗೆ ಲಿಖಿತ ನೋಟಿಸ್ ಕೊಟ್ಟಿರುವುದಿಲ್ಲ. ನಾನು ಲೋಕೇಶ್ ರವರ ಜೊತೆ ಆಸ್ಪತ್ರೆಯಿಂದ ಠಾಣೆಗೆ ಹೋಗಿದ್ದೆನು. ಯಾರ ಶರ್ಟು ಎಂಬುದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ನನಗೆ ಯಾರ ಶರ್ಟು ಎಂದು ನನಗೆ ಗೊತ್ತಿದೆ ಎಂದು ಹೇಳುತ್ತಾರೆ. ನಾನು ಪೊಲೀಸರು ಪೊಲೀಸ್ ಠಾಣೆಯಲ್ಲಿ ನಿಪಿ–6 ರಂತೆ ಪಂಚನಾಮೆ ಮಾಡಿ ಮುಮಾ–1 ವಶಪಡಿಸಿಕೊಂಡರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಲೋಕೇಶ್ ನನ್ನ ದೊಡ್ಡಪ್ಪನ ಮಗ ಇರುತ್ತಾನೆ. ನಾನು ಪಿರ್ಯಾದಿ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/–

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಡಗು–ಮಡಿಕೇರಿ.